## 24-09-2023




## "ಯುವಶಕ್ತಿಯೇ ರಾಷ್ಟ್ರಶಕ್ತಿಯಾಗಿಸಿದ ರಾ.ಸೇ.ಯೋ"

ಸಂಘಟಿತ ಸಮಾಜದಲ್ಲಿ ಮನುಷ್ಯ ಸ್ವಾರ್ಥಪರ ನಿಲುವುಗಳನ್ನು ತಳೆಯದೆ ನಿಸ್ವಾರ್ಥ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಬಹುಮುಖ್ಯವಾಗಿದ್ದು, ಸ್ವಾಮಿ ವಿವೇಕಾನಂದರ ಚಿಂತನೆಗಳು ದೇಶದ ತರುಣ ವರ್ಗಕ್ಕೆ ಪೂರಕವಾಗಿದೆ. ಈ ನಿಟ್ಟಿನಲ್ಲಿ ಯುವಶಕ್ತಿಯೇ ರಾಷ್ಟ್ರಶಕ್ತಿಯಾಗಿಸಿದ ರಾ.ಸೇ.ಯೋ. ಅನ್ನು ಯಾರು ಮರೆಯುವಂತಿಲ್ಲ ಎಂದು ಪ್ರೊ.ಎನ್.ಮೋಹನ್ ಕುಮಾರ್ ಅವರು ಅಭಿಪ್ರಾಯಪಟ್ಟರು.

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ, ಸಪ್ಟೆಂಬರ್ 24ರಂದು ರಾ.ಸೇ.ಯೋ ದಿನಾಚರಣೆದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಗಿಡಕ್ಕೆ ನೀರೆರೆಯುವುದರ ಮುಖೇನ ಉಧ್ಘಾಟಿಸಿದ ಕಾಲೇಜಿನ ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಎನ್.ಮೋಹನ್ ಕುಮಾರ್ ಸುಧೀರ್ಘ ಭಾಷಣದಲ್ಲಿ ರಾ.ಸೇ.ಯೋ.ಯ ಧ್ಯೇಯೋದ್ಧೇಶಗಳನ್ನು ತಿಳಿಸಿಕೊಟ್ಟರಲ್ಲದೆ, ಮಹಾತ್ಮಗಾಂಧಿಯವರ ತಾತ್ವಿಕ ನಿಲುವುಗಳಿಂದ ರಾಷ್ಟ್ರದ ಅಭಿವೃದ್ಧಿ ಹೊಂದುವುದಲ್ಲದೆ ಮನುಷ್ಯ ಸಮಾಜದ ಮೌಲ್ಯಗಳನ್ನು ಹಲವು ನಿದರ್ಶನಗಳ ಮೂಲಕ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರು ವಹಿಸಿದ್ದರು. ನೂತನ ಎನ್.ಎಸ್.ಎಸ್ ಕಾರ್ಯಕ್ರಮಧಿಕಾರಿ ಪ್ರೊ.ಎಸ್.ಸಿದ್ದರಾಜು ಪ್ರಾಸ್ತಾವಿಕ

ನುಡಿಗಳೊಂದಿಗೆ ಸ್ವಾಗತಿಸಿದರು. ವೇದಿಕೆಯಲ್ಲಿ ಕಾಲೇಜಿನ ಬೋಧನಾಂಗದ ಪ್ರೊ.ಆರ್.ಸಿದ್ದರಾಜು, ಡಾ.ಧನಂಜಯ ಪಾಲಹಳ್ಳಿ ಉಪಸ್ಥಿತರಿದ್ದರು ಪ್ರೊ.ಬಿ.ಕೆ.ವತ್ಸಲ ಅವರು ವಂದಿಸಿದರೆ ಪ್ರೊ.ಎಸ್.ಲಾವಣ್ಯ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.









ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು






ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು
ಸಮಯ: 10.30 ಗಂಟೆ









